ಆ ಕಾಲದಲ್ಲೇ ಸಕ್ರಿಯನಾಗಿದ್ದ. ಐಜಿ ರಸ್ತೆಯ ಮೂಕಾಂಬಿಕಾ ಕಾಫಿ ವರ್ಕ್ಸ್ ಎಂದರೆ ಈಗಲೂ ಮೂರೂರಿಗೆ ಫೇಮಸ್ಸು. ಹಾಗಾಗಿ ಅವನ ಮೇಲೆ ಕೊಂಚ ಹೆಚ್ಚಿನ ವಿಶ್ವಾಸ ಶೇಷಾಚಲನಿಗೆ.

ಸುಬ್ಬರಾಯನ ಮಾತುಗಳನ್ನು ಶ್ರವಣ, ಮನನ, ನಿಧಿಧ್ಯಾಸನಗಳಾಗಿ ನೆನಪಿನಲ್ಲಿರಿಸಿ ರಾಯಲ್ ಹೋಮ್‌ಸ್ಟೇಗೆ ಬರುವ ಅತಿಥಿಗಳಿಗೆ ಶೇಷಾಚಲ ಕಡೆಗೂ ಚೆನ್ನಾಗಿಯೇ ಸತ್ಕರಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತಿದ್ದ. ಅವರನ್ನು ಪ್ರಜ್ಞಾಪೂರ್ವಕವಾಗಿ ಸಹಿಸಿಕೊಳ್ಳುವ ಯತ್ನವನ್ನೂ ಮಾಡುತ್ತಿದ್ದ. ಆದರೆ ಎರಡು ದಿನ ಬ್ಲಾಕ್ ಮಾಡಿಕೊಂಡು ಬಂದು ಒಂದೇ ದಿನಕ್ಕೆ ಹೊರಟೋಗ್ತೀವಿ ಅಂತ ಕ್ಯಾತೆ ತೆಗೆಯೋರ ಮೇಲೆ ಅವನ ಅನುಕಂಪ ಮರೆತೇಹೋಗ್ತಿತ್ತು. ಮುಖ ಮೂತಿ ನೋಡದೆ, ಅದೆಲ್ಲಾ ಆಗೋದಿಲ್ಲವೆಂದು ಎರಡೂ ದಿನದ ಹಣ ಕೀಳುತ್ತಿದ್ದ. ಊಟ ರುಚಿಯಿಲ್ಲ ಎಂದು ದೂರಿದವರಿಗೆ ವ್ಯಂಗದ ಮಾತಿನಲ್ಲೇ ತಪರಾಕಿ ಕೊಡುತ್ತಿದ್ದ. ಇವನ ಮಾತು ಕೇಳೋ ಒಳ್ಳೆಯ ಜನರೂ ಬರುತ್ತಿದ್ದರು ಅನ್ನೋದು ಬೇರೆ ಮಾತು. ಒಂದು ವರ್ಷದ ಬಳಿಕ ಹಂಗೂ ಹಿಂಗೂ ಶೇಷಾಚಲನ ರಾಯಲ್ ಹೋಮ್‌ಸ್ಟೇ, ಗೂಗಲ್ ರೇಟಿಂಗ್‌ನಲ್ಲಿ ಮೂರೂವರೆ ಸ್ಟಾರ್ ಗಿಟ್ಟಿಸಿತ್ತು. ಮಗ ಚಂದ್ರಹಾಸ ಪೇಯ್ಡ್ ರೇಟಿಂಗ್ ಬಗ್ಗೆ ಹೇಳುತ್ತಿದ್ದಾಗ, 'ಅದೇನು ಮಾಡ್ತೀಯೋ ನೋಡು. ಬರೋ ಜನ ಜಾಸ್ತಿ ಆದರೆ ಸಾಕು' ಅನ್ನುತ್ತಿದ್ದ.

ಶೇಷಾಚಲ, ಮೊದಲೆಲ್ಲಾ ತಾನೂ ಕಾಫಿ ಬೀಜ ಬೆಳೆಯೋ ಕೆಲಸದಲ್ಲಿ ತೊಡಗಿಸಿಕೊಳ್ಳುತ್ತಿದ್ದ. ವರ್ಷಕ್ಕೊಮ್ಮೆ ಬೆಳೆಯೋ ಬೆಳೆ. ನವೆಂಬರ್ ಡಿಸೆಂಬರ್‌ನಲ್ಲಿ ಫಲಕೊಡುತ್ತಿತ್ತು. ಕಾಫಿ ಗಿಡ ಸೊಂಪಾಗಿ ಬೆಳೀಬೇಕಾದರೆ ಸಿಲ್ವರ್ ಓಕ್ ಗಿಡಗಳ ಸುತ್ತಲೇ ಬೆಳೆದರೆ ಚೆನ್ನವೇನೋ ಎನ್ನುವ ಹಾಗಿತ್ತು ಚಿಕ್ಕಮಗಳೂರಿನ ಸ್ಥಿತಿ. ಎಲ್ಲಿ ನೋಡಿದರೂ ಅದೇ ಆಕಾಶದೆತ್ತರ ಬೆಳೆದ ಮರಗಳು. ಕಾಫಿ, ಮೆಣಸು ಬೆಳೆಗೆ ಬೇಕಾದಷ್ಟು ತಂಪು ಬೆಳಕನ್ನ ಕೊಡೋಕೆ ಅವೇ ಸರಿ ಅನ್ನೋ ನಂಬಿಕೆ. ಹಕ್ಕಿಗಳು ಕೂಡಕ್ಕೂ, ಕೂತವನ್ನ ನೋಡೋಕ್ಕೂ ಜಾಗವಿಲ್ಲದ ಹಾಗೆ ಸುಮ್ಮನೇ ಉದ್ದಕ್ಕೆ ಬೆಳೆಯುತ್ತವೆ ಅವು ಅನ್ನೋದೇ ಬೇಜಾರು. ಅಂದ ಹಾಗೆ ಕಾಫಿ ಗಿಡದ ಜೊತೆಯಲ್ಲಿ ಕಾಳುಮೆಣಸಿನ ಪೊದೆ ಇರಲೇಬೇಕು. ಚಳಿಗಾಲದಲ್ಲಿ ಅವನ್ನು ಸಿಂಬೆ ಸುತ್ತಿ ಸಿಲ್ವರ್ ಓಕ್ ಮರಕ್ಕೆ ಬಂಧಿಸಿಬಿಟ್ಟರೆ ಒಂದು ಕೆಲಸವಾಗುತ್ತಿತ್ತು. ಬೇಸಿಗೆಯಲ್ಲಿ ಬೇರ್ಪಡಿಸುವುದು, ಆಗಾಗ ಯುರಿಯಾ, ಫಾಸ್ಪೇಟ್ ಹಾಕೋದು, ಮಳೆ ಕಾಯೋದು, ಆಗಾಗ ನೀರು ಹರಿಸೋದು. ಹೆಚ್ಚುಕಡಿಮೆ ವರ್ಷಪೂರ್ತಿ ಕೆಲಸ. ತೂಗುವ ಆ ಮೆಣಸಿನ ಹಸಿರು ಗೊಂಚಲು, ಅದರ ಫಸಲು, ಕಾಫಿ ಬೆಳೆಯ ಲಾಭ ಜೊತೆಗೆ ಹೋಮ್‌ಸ್ಟೇ ಆದಾಯ, ಈಗ ಶೇಷಾಚಲನ ಆತ್ಮವಿಶ್ವಾಸದ ಪ್ರತೀಕಗಳಾಗಿದ್ದವು.

ಒಂದು ಬೆಳೆಯ ಕಾಫಿ ಬೀಜಕ್ಕೆ ಒಂದೇ ಬಾರಿ ಔಷಧಿ ಹಾಕೋದು. ಆದರೆ, ಟೀ ಹಂಗಲ್ಲ. ಎಲೆ ಒಣಗಿಸಿ ಪುಡಿ ಮಾಡಿ ಪ್ಯಾಕ್ ಆಗೋವರೆಗೆ ಲೆಕ್ಕವಿಲ್ಲದಷ್ಟು ಬಾರಿ ಔಷಧಿ ಸುರೀತಾರೆ. ಟೀ ಕುಡಿದರೆ ಕ್ಯಾನ್ಸರ್ ಬರೋ ಎಲ್ಲಾ ಚಾನ್ಸೂ ಇದೆ. ಕಾಫಿ ಸೇಫು ಯಾವಾಗಲೂ ಎನ್ನುವುದು ಚಿಕ್ಕಮಗಳೂರಿನ ಎಲ್ಲಾ ಕಾಫಿ ಬೆಳೆಗಾರರ ಹಾಗೆ ಶೇಷಾಚಲನ ನಿಲುವು. ವರ್ಷವಿಡೀ ಚೆನ್ನಾಗಿ ನೀರುಣಿಸಿ, ಸೋತು ಮುದಿಯಾದ ಹಳದಿ ರೆಂಬೆಗಳನ್ನು ಕತ್ತರಿಸಿ, ಕಸಿ ಮಾಡುತ್ತಾ, ತೋಟದ ಹನ್ನೆರಡೂ ಎಕರೆಗಳನ್ನು ಆಗ ಅಡ್ಡಾಡುತ್ತಿದ್ದ ಶೇಷಾಚಲ, ನಾಲ್ಕು ಹೆಣ್ಣಾಳುಗಳೊಂದಿಗೆ ತಾನೂ ಕೆಂಪಾದ ಕಾಯಿಗಳನ್ನು ಹುಡುಕಿ, ಕಿತ್ತುಕೊಂಡು ಸೊಂಟಕ್ಕೆ ಬಿಗಿದ ಬಟ್ಟೆಯ ಬ್ಯಾಗಿನೊಳಗೆ ತುರುಕುತ್ತಿದ್ದ. ಬೆಳಗ್ಗಿನಿಂದ ಸಂಜೆವರೆಗೆ ಕಾಯಿ ಕೀಳುವುದು, ತೋಟದ ಮುಂಭಾಗದ ಮೈದಾನದಲ್ಲಿ ಕೂತು, ಸಣ್ಣ, ಮಧ್ಯದ ಸೈಜು, ದೊಡ್ಡ ಕಾಯಿಗಳನ್ನು ಬೇರ್ಪಡಿಸುವುದು, ಹೊಟ್ಟು ತೆಗೆದು ನಾಲ್ಕಾರು ದಿನ ಒಣಗಿ ಹಾಕುವುದು, ಚೆನ್ನಾಗಿ ಒಣಗಿದ ಮೇಲೆ, ಸುಬ್ಬರಾಯನ ಕಾಫಿ ವರ್ಕ್ಸ್‌ಗೆ ತಲುಪಿಸಿ ಹಣ ಎಣಿಸಿಕೊಳ್ಳುವುದು. ಇವು ಕಾಫಿ ಸೀಸನ್ನಿನಲ್ಲಿ ಶೇಷಾಚಲನ ಕೆಲಸಗಳಾಗಿದ್ದವು.

3

ಚಿಕ್ಕುರುಗೋಡಿನಿಂದ ಗೌರಿಬಿದನೂರು, ಕೊರಟಗೆರೆ ಮಾರ್ಗವಾಗಿ ತುಮಕೂರಿಗೆ ತಲುಪಿದ ಶ್ರೀನಿವಾಸ, ಅವರಿವರನ್ನ ಕೇಳಿ ಅಲ್ಲಿ ಚಿಕ್ಕಮಗಳೂರಿನ ಬಸ್ಸು ಹತ್ತಿದ. ಪ್ರಯಾಣದಲ್ಲಿ, ರಸ್ತೆಗುಂಟ ಇದ್ದ ಬಯಲುಸೀಮೆಯ ಜಾಲಿ, ಗಿಡಮರಗಳೆಲ್ಲವೂ ನಿಧಾನ ಮರೆಯಾಗಿ ಅಡಿಕೆ ಮರಗಳು, ಕಾಡುಮರಗಳೆಲ್ಲವೂ ಸಿಂಗರಿಸಿ ನಿಂತುಕೊಂಡವು. ಯಾವುದೋ ಒಂದು ಜೈವಿಕ ಹದವನ್ನು, ಪರಿಸರವೇ ನಿರಂತರ ಪೋಷಿಸುತ್ತಿದೆ ಎನ್ನುವ ಹಾಗೆ ಅವನ ಪ್ರಯಾಣ ಕಾಣುತ್ತಿತ್ತು. ಕಡೂರಿನ ಆಸುಪಾಸಿನಲ್ಲಿನ ಸಣ್ಣ ಪುಟ್ಟ ತಿರುವುಗಳು ಶ್ರೀನಿವಾಸನ ದೇಹದಲ್ಲಿ ಏನನ್ನೋ ಉಮ್ಮಳಿಸಿದವು. ಭೂತ–ಭವಿಷ್ಯತ್ತುಗಳು ಅವನ ಮೇಲೆ ಕವಿದ ಸಂಕಟ, ಅದನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಗದ ಅಸಹಾಯಕತೆ, ಶ್ರಮಗಳೆಲ್ಲವೂ ಅವನ ಬಾಡಿದ ಚಡಪಡಿಕೆಯಲ್ಲಿ ಗೋಚರವಾದವು. ಜೇಬಿನಲ್ಲಿದ್ದ ಸಾವಿತ್ರಮ್ಮನ ನೋಕಿಯಾ ಕೀಪ್ಯಾಡು ಮೊಬೈಲು ಈಗ ಶ್ರೀನಿವಾಸನ ಆಸ್ತಿಯಾಗಿತ್ತು. 'ಎಲ್ಲಿದ್ದೀಯಪ್ಪೀ' ಅಂತ ಸುಮಿತ್ರಕ್ಕ ಅದೇ ನಂಬರಿಗೆ ಫೋನು ಮಾಡಿದಳು. ಪಕ್ಕದಲ್ಲಿದ್ದ ಅನಾಮಿಕನನ್ನ ಕೇಳಿ 'ದಂಟರಮಕ್ಕಿ ಹತ್ತಿರ' ಅಂದ. 'ರಾಯಣ್ಣ ಸರ್ಕಲ್ ಹತ್ರ ಇಳುಕೋ, ಸ್ಟೇಡಿಯಂ ರೋಡ್ ಅಂತ ಯಾರನ್ನಾದರೂ ಕೇಳು. ಅಲ್ಲೇ ಮೂರನೇ ಕ್ರಾಸಿನಲ್ಲಿ ನಮ್ಮನೆ' ಅಂದಳು.

ಅವನು ಮನೆಗೆ ಬಂದಾಗ ಶೇಷಾಚಲ ಇರಲಿಲ್ಲ. ಸುಮಿತ್ರಕ್ಕ ಅವನನ್ನು ನೋಡಿ ಕಣ್ಣೀರು ಸುರಿಸಿದಳು. 'ಊಟ ಮಾಡು, ಬಾವ ಬರ್ತಾರೆ' ಅಂದಳು. ಶೇಷಾಚಲ ಸದ್ಯಕ್ಕೆ ಬರೋದಿಲ್ಲ ಎನ್ನುವ ಸತ್ಯ ಅವಳಿಗೆ ಗೊತ್ತಿತ್ತು. ಅಪ್ರಿಯವಾದದ್ದು ಹೇಳುವುದರಲ್ಲಿ ಅರ್ಥವಿಲ್ಲ ಎನ್ನುವಂತೆ 'ನೀನು ಬಂದರೆ, ಕತ್ತಲಾಗೋದರ ಒಳಗೆ ಕಬ್ಬಿನಳ್ಳೀಗೆ ಕಳಿಸಿಕೊಡು ಅಂದರು. ಇಲ್ಲಿಂದ ಅರ್ಧ ಗಂಟೆ ಹೋಗಬೇಕು. ಬೇಗ ಕತ್ತಲಾಗುತ್ತೆ. ತಡೀ, ಸುಮಿತನಿಗೆ ಹೇಳ್ತೀನಿ' ಅಂದಳು. ನಿರೀಕ್ಷೆಯಂತೆಯೇ ಗಂಡ ಬಾರದ ಕಾರಣ, ಸುಮಿತನ ಜೊತೆ ಮಾಡಿ, ಅವನನ್ನು ಬ್ಯಾಗೇಜು ಸಹಿತ ಕಬ್ಬಿನಳ್ಳಿ ತೋಟಕ್ಕೆ ಕಳಿಸಿದಳು. ಅಲ್ಲಿ ಅವನನ್ನ ಎದುರುಗೊಳ್ಳಲು ಸತೀಶ ಮಾತ್ರ ಇದ್ದ.

4

'ಏನಯ್ಯಾ, ಚೆನ್ನಾಗಿದ್ದೀಯಾ?' ಬಾವ ಶೇಷಾಚಲನ ಮಾತುಗಳಲ್ಲಿನ ದಾರ್ಷ್ಟ್ಯ ಶ್ರೀನಿವಾಸನನ್ನು ಕನಲಿಸಿದ ಹಾಗಾಯಿತು. ದೇಹವನ್ನು ಮುದುಡಿದ ತನ್ನ ಎಂದಿನ ಸಂಕೋಚದಲ್ಲಿ 'ಚೆನ್ನಾಗಿದ್ದೇನೆ ಬಾವ' ಎಂದ. ತಣ್ಣನೆಯ ಕೊರಡಿನಂತಿದ್ದ ತನ್ನ ಕೈಯನ್ನು ಶ್ರೀನಿವಾಸನ ಭುಜದ ಮೇಲಿರಿಸಿದ ಬಾವ, 'ನೋಡಯ್ಯಾ, ಗೆಸ್ಟ್‌ಗಳನ್ನ ಚೆನ್ನಾಗಿ ನೋಡಿಕೋಬೇಕು. ಅವರು ಮುನಿಸಿಕೊಳ್ಳುವ ಹಾಗಾಗಬಾರದು. ಕಾಫಿ ತೋಟದಲ್ಲಿ ದಿನವೂ ಅಡ್ಡಾಡಬೇಕು. ಕೆಲಸದವರ ಮೇಲೆ ನಿಗಾ ಇಡಬೇಕು. ಹೊಸವು ಎರಡು ರೂಂ ಕಟ್ಟಿಸ್ತಿದೀನಿ. ಏನೇ ಇದ್ದರೂ ಫೋನು ಮಾಡು. ಎರಡು ದಿನಕ್ಕೊಮ್ಮೆ ನಾನೂ ಬರ್ತೀನಿ' ಅಂದ.

ನಿನ್ನೆಯಿಂದಲೇ ಅಡುಗೆ ಮನೆ ಹಿಂದೆ ಇದ್ದ ಸರ್ವೆಂಟ್ ಕ್ವಾರ್ಟರ್ಸ್‌ನಲ್ಲಿ ಅವನ ಮತ್ತು ಬಾಣಸಿಗ ಶ್ರೀನಾಥನ ವಾಸ. ಆ ಕೊಠಡಿಯ ಒಂದು ಮೂಲೆಯಲ್ಲಿದ್ದ ನಾರಿನ ಹಾಸಿಗೆ ಇಷ್ಟು ದಿನ ತನ್ನ ದಾರಿಯನ್ನೇ ಕಾಯುತ್ತಿತ್ತು ಎನ್ನುವ ಹಾಗೆ, ಶ್ರೀನಿವಾಸನೊಂದಿಗೆ ಒಂದು ಮೂಕ ಸಂಬಂಧ ಸ್ಥಾಪಿಸಿಕೊಂಡಿತು. ಚಿಕ್ಕುರುಗೋಡಿನಲ್ಲಿ ಹೀಗಿರಲಿಲ್ಲ. ಅಲ್ಲಿ ಚಳಿಗಾಲದ ಚಳಿಯೂ, ಮಳೆಗಾಲದ ಮಳೆಯೂ ತನ್ನ ಅವಯವಗಳನ್ನೇ ನಿಷ್ಕ್ರಿಯಗೊಳಿಸಲು ಯೋಜಿಸುವ ಸಾಮರ್ಥ್ಯ ಹೊಂದಿರಲಿಲ್ಲ. ಶ್ರೀನಾಥ, ಬೆಳಿಗ್ಗೆಯೇ ಕಾಫಿ ಮಾಡಿ ಕೂಗುತ್ತಿದ್ದ. ಶ್ರೀನಿವಾಸ ಅಲುಗಾಡುತ್ತಲೇ ಕೆಲಸದವರ ಜೊತೆ ಎಸ್ಟೇಟೆಲ್ಲಾ ಒಂದು ಬಾರಿ ಸುತ್ತಾಡುತ್ತಿದ್ದ. ಭಾವ ಹೇಳಿದ ಹಾಗೆ ಕಾಫಿ ಗಿಡದಲ್ಲಿ ಎಲ್ಲಾದರೂ ಹಳದಿ ಕಾಂಡಗಳು ಕಾಣುತ್ತವೆಯಾ ಎಂದು ಗಮನಿಸುತ್ತಿದ್ದ. ಒಂದು ಗಿಡದ ಮೂಲೆಯಲ್ಲಿ ಎಲ್ಲೋ ಅಲ್ಲೊಂದು ಇಲ್ಲೊಂದು ಸೇರಿಕೊಂಡಿರುತ್ತಿದ್ದವು. ಅವನ್ನು ಕೂಡಲೇ ಕತ್ತರಿಸಿ ಕಸಿ ಮಾಡಬೇಕಾಗುತ್ತಿತ್ತು. ಊರಿನಲ್ಲಿ, ರೇಷ್ಮೆ ಕೃಷಿ ಮಾಡಬೇಕಾದರೂ ಹೀಗೇ ಅಲ್ಲವಾ? ಅಣ್ಣ ಮೊಟ್ಟೆ ತಂದು ತೋಟದ ಮನೆಮೂಲೆಯ ಆ ಹಜಾರದಲ್ಲಿ ಹರಡಿದ ದಿನದಿಂದ ಅದಕ್ಕೆ ಸರಿಯಾದ ರೀತಿಯಲ್ಲಿ ಬೆಳಕು ಬೀಳಬೇಕು. ಬಿಸಿಯೂ ಜಾಸ್ತಿಯಾಗಬಾರದು, ತಣಿವೂ ಹೆಚ್ಚಬಾರದು. ಇಳುವರಿ ಜಾಸ್ತಿ ಬರಬೇಕಂತ ಮಂಕರಿಗಳನ್ನ ಹತ್ತಿರ ಇಡಬಾರದು. ಮೊಟ್ಟೆ ಏನಾದರೂ ಹಳದಿ ತಿರುಗಿತೋ ತನ್ನ ಜಾತಕದಲ್ಲಿ ಶನಿಸಂಚಾರ ಆರಂಭವಾದ ಹಾಗೇ ಆಯಿತು. ನಾಲ್ಕು ವರ್ಷದ ಹಿಂದೆ, ಮೊಟ್ಟೆಯ ಮೇಲೆ ಕಂಡ ಹಳದಿ ಬಣ್ಣಕ್ಕೆ ತಾನೇ ಕಾರಣ ಎಂಬಂತೆ ಅಣ್ಣ ಕಿರುಚಿದ್ದು, ಆ ವರ್ಷ ಆದ ಲಾಸಿಗೆಲ್ಲಾ ತಾನೇ ಹೊಣೆ ಎಂದು ದೂರಿದ್ದು, ಅಮ್ಮನ ಕಣ್ಣೀರು ಎಲ್ಲಾ ಜ್ಞಾಪಕಕ್ಕೆ ಬಂದು, ಹಳದಿ ಬಣ್ಣ ಎಂದರೆ